(ಇಂದು ದಿನಾಂಕಃ 23-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ವಿ.ಆರ್.ಎಮ್. ವಕೀಲರಿಂದಃ</u>**

ಅಪಘಾತ 2 ವರ್ಷಗಳ ಹಿಂದೆ ಆಗಿದೆ. ಅಪಘಾತ ಪೋಲಕಪಳ್ಳಿ ಪವರ ಪ್ಲಾಂಟ್ ಹತ್ತಿರ ಆಗಿದೆ. ನಾನು ಪವರ ಪ್ಲಾಂಟನಲ್ಲಿ ಕೆಲಸ ಮಾಡುತ್ತಿದ್ದೆ ಕೆಲಸ ಮುಗಿಸಿಕೊಂಡು ರಸ್ತೆ ಬದಿಯಲ್ಲಿ ನನ್ನ ಬೈಕ್ ನಿಲ್ಲಿಸಿಕೊಂಡು ನಿಂತಿದ್ದಾಗ ಹಿಂದಿನಿಂದ ಬಂದ ಕಾರು ನನಗೆ ಡಿಕ್ಕಿ ಪಡಿಸಿ ಅಪಘಾತ ಆಗಿದೆ. ನಾನು ಕಾರಿನ ನಂಬರ ನೋಡಿಲ್ಲ. ನನ್ನ ತಂದೆ ದೂರು ನೀಡಿದ್ದಾರೆ. ಅಪಘಾತ ಆದ 5 ದಿನದ ನಂತರ ದೂರು ನೀಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು

ನಾನು ಆಸ್ಪತೆಯಲ್ಲಿ ಚಿಕಿತ್ಸೆ ಪಡೆಯತ್ತಿದ್ದೆ ಕಾರಣ ವಿಳಂಬವಾಗಿದೆ ಎಂದು ಹೇಳುತ್ತಾರೆ. ಆಸ್ಪತ್ರೆಯಿಂದ ಪೊಲೀಸ್ ಠಾಣೆಗೆ MLC ಕಳುಹಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಪ್ರಜ್ಞೆ ಇರಲಿಲ್ಲ ಕಾರಣ ಅಪಘಾತ ಹೇಗೆ ಆಗಿದೆ ಎಂದು ನಾನು ವೈದ್ಯರಿಗೆ ಹೇಳಿಲ್ಲ. ನಿ.ಪಿ 2 ರಲ್ಲಿ MLC ಪ್ರಕಾರ ದೂರು ನೀಡಿದ್ದೇನೆ ಎಂದು ಉಲ್ಲೇಖ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಸ್ಥಳ ನಕಾಶೆ ಪ್ರಕಾರ ನಾನು ರಸ್ತೆ ಬದಿಯಲ್ಲಿ ನಿಂತಿರಲಿಲ್ಲ. ರಸ್ತೆಯಲ್ಲಿ ನಿಂತಿದ್ದೆ ಎಂದರೆ ಸರಿಯಲ್ಲ. ನಾನು ರಸ್ತೆಯಲ್ಲಿ ನಿಂತಿದ್ದಾಗ ಯಾವುದೋ ಒಂದು ಕಾರು ಡಿಕ್ಕಿ ಪಡಿಸಿ ಹೋಗಿದ್ದು 5 ದಿನಗಳ ನಂತರ ಪರಿಹಾರ ಪಡೆಯುವ ಸಲುವಾಗಿ ಕೆ.ಎ 32, ಡಿ-8910 ಕಾರು ವಿರುದ್ದ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ.

ಅಪಘಾತದ ನಂತರ ಮೊದಲು ಚಂದಾಪೂರ ಸರ್ಕಾರಿ ಆಸ್ಪತ್ರೆಗೆ, ಅಲ್ಲಿಂದ ಕಲಬುರಗಿಯ ಜಯದೇವ ಆಸ್ಪತ್ರೆಗೆ ಹೋದೆವು. ಜಯದೇವ ಆಸ್ಪತ್ರೆಯಲ್ಲಿ 4-5 ದಿನ ಒಳ ರೋಗಿಯಾಗಿದ್ದೆ. ನಾನು ಜಯದೇವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದೇನೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಿ ಸಣ್ಣ-ಪುಟ್ಟ ಗಾಯಗಳಾಗಿದ್ದು ನಾನು ಚಿಂಚೋಳಿಯ ಸರಕಾರಿ ಆಸ್ಪತ್ರೆಯಲ್ಲಿ ಮಾತ್ರ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಶಸ್ತ್ರ ಚಿಕಿತ್ಸೆ ಆಗಿಲ್ಲ ಎಂದರೆ ಸರಿ. ನಿ.ಪಿ-8 ನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ವೈದ್ಯಕೀಯ ಚಿಕಿತ್ಸೆಗೆ 50,000/- ಖರ್ಚು ಮಾಡಿದ್ದೇನೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ. ನನಗೆ 30 ಕ್ಕಿಂತ ಹೆಚ್ಚು ವಯಸ್ಸು ಆಗಿದೆ ಎಂದರೆ ಸರಿಯಲ್ಲ. ಪೋಲಕಪಳ್ಳಿ ಪವರ ಪ್ಲಾಂಟ್‌ನಲ್ಲಿ 4-5 ವರ್ಷ ಕೆಲಸ ಮಾಡಿದ್ದೆ. ನಾನು ಅಲ್ಲಿ ನೇಮಕ ಗೊಂಡ ಬಗ್ಗೆ ದಾಖಲಾತಿ ಸಲ್ಲಿಸಿಲ್ಲ. ನನಗೆ ನಗದು ರೂಪದಲ್ಲಿ ಸಂಬಳ ಕೊಡುತ್ತಿದ್ದರು. ನಾನು ಅಪಘಾತದ ಮುಂಚೆ ಪ್ಲಾಂಟ್ನಲ್ಲಿ ಕೆಲಸ ಮಾಡುತ್ತಿದ್ದೆ ಮತ್ತು ನನಗೆ ತಿಂಗಳಿಗೆ 20,000/- ಸಂಬಳ ಕೊಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ನಂತರ ನಾನು ಕೆಲಸ ಕಳೆದುಕೊಂಡಿದ್ದೇನೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ. ನಾನು ಕಾರು ಮಾಲೀಕರ ಜೊತೆ ಸೇರಿಕೊಂಡು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆದ ದಿನದಂದು ಕಾರು ನಂಬರ ಕೆ.ಎ 32 ಡಿ-8910 ಗೆ ಯಾವುದೇ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ

ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.